# ಮೂರುತಿಯನೆ ನಿಲ್ಲಿಸೋ ಮಾಧವ ನಿನ್ನ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 466.
2. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 61.
3. **Note:** Lyrics given without highlights are as per Ref. 1. The wordings in Ref. 2 are same as in Ref. 1 except few which are not considered here.
4. **Note:** This song is not available in another standard book that I refer.
5. **Note:** Singer has followed Ref. 1.
6. **Note:** In Ref. 2 the ankita mentioned is "purandara viTTala" whereas in Ref. 1 the ankita is "siri purandara viTTala". We consider Ref. 1 as standard and taken that ankita for listing.

ರಾಗ: ಖಮಾಚ್ ತಾಳ: ರೂಪಕ

ಮೂರುತಿಯನೆ ನಿಲ್ಲಿಸೋ ಮಾಧವ ನಿನ್ನ || ಪ ||
ಎನ್ನ ಹೃದಯ ಕಮಲದೊಳು ಒದಗಿ ನೆನೆಯುವಂತೆ ನಿನ್ನ || ಅಪ ||

ಎಳೆ ತುಳಸಿಯ ವನಮಾಲೆಯು ಕೊರಳೊಳು
ಹೊಳೆವ ಪೀತಾಂಬರ ಉಡಿಯೊಳೊಪ್ಪುವ ನಿನ್ನ || ೧ ||

ಮುತ್ತಿನ ಹಾರ ನವರತ್ನದುಂಗುರ ಬೆರಳೊಳು
ಮತ್ತೆ ಶ್ರೀ ಲಕುಮಿಯು ಉರದೊಳೊಪ್ಪುವ ನಿನ್ನ || ೨ ||

ಭಕ್ತರ ಕಾಮಧೇನು ಕಲ್ಪವೃಕ್ಷವೆಂದೆನಿಸುವ
ಭಕ್ತವತ್ಸಲ ಸಿರಿ ಪುರಂದರ ವಿಠಲ ನಿನ್ನ ||೩||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಪರಮಾತ್ಮನ ಸಾಲಂಕೃತ ರೂಪವು ಕಣ್ಣ ಮುಂದೆ ನಿಲ್ಲುವಂತೆ ಆಹ್ವಾನಿಸಿದ್ದಾರೆ.

**ಮೂರುತಿಯನು ನಿಲ್ಲಿಸು =** ಪ್ರತ್ಯಕ್ಷನಾಗು

**ಶ್ರೀ ಲಕುಮಿಯು ಉರದೊಳೊಪ್ಪುವ : -** ಲಕ್ಷ್ಮೀ ದೇವಿಯು ಪರಮತ್ಮನನ್ನು ಎಂದಿಗೂ ಅಗಲದೆ ಅವನ ಎದೆಯ ಮೇಲೆ ಇರುವಳು. (ಭಾರತ ತಾತ್ಪರ್ಯ ನಿರ್ಣಯ ೧ - ೨)

**Classification:** Keerthane
**Ankita:** siri purandara vittala
**Location:** NA
**Category:** Pooja Tatva
**Sub-Category:** Madhava, hrudaya, padma, tulasi, muttu, abharana, ungura, kamadhenu, kalpavruksha, Dhyana, mana,
**Pravachana:** NA
**Explanation:** Pandith Parashuram Betageri, Bengaluru.